"ಕನ್ನಡ ಶ್ರಾವಣ -೦೪"

*[2nd-BSC/BCA]*

*"ಘಟಕ:-೨: ಸಹಿಷ್ಣುತೆ"*

*||||||||||||||||||||||||||||||||||||||||||||*

*೧ .ಈತ ಲಿಂಗದೇವ ಶಿವನು ಆತ ರಂಗಧಾಮ ವಿಷ್ಣು*

*ಲೇಖಕರು-"ಹೆಳವನಕಟ್ಟೆ ಗಿರಿಯಮ್ಮ"*

ಸ್ವೀಕೃತ ಮೂಲ :-ಹೆಳವನಕಟ್ಟೆ ಗಿರಿಯಮ್ಮ .

(ಸಂಪಾದಕರು) :ಬಿ.ವಿ. ವಿರಭದ್ರಪ್ಪ.

*ತತ್ವಪದಕಾರ್ತಿಯ ಪರಿಚಯ:-*

'ಹೆಳವನಕಟ್ಟೆ ಗಿರಿಯಮ್ಮನವರು' *ಕ್ರಿ.ಶ. ೧೭೫೦* ರ ಸುಮಾರಿನಲ್ಲಿ .*ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ* ಜನಿಸಿದರು.

ಇವರ ತಂದೆ:- *ಬಿಷ್ಟಪ್ಪ*

ತಾಯಿ:- *ತುಂಗಮ್ಮ*

ಈ ದಂಪತಿಗಳು ತಿರುಪತಿ ತಿಮ್ಮಪ್ಪನ ದರ್ಶನ ಪಡೆದ ತರುವಾಯ ತಿಮ್ಮಪ್ಪನ ಅನುಗ್ರಹದ ಸಂಕೇತದ ಫಲವಾಗಿ ಪಡೆದ ಹೆಣ್ಣು ಮಗುವಿಗೆ *ಗಿರಿಯಮ್ಮ* ಎಂದು ನಾಮಕರಣ ಮಾಡಿದರು.

ಆಕೆ ಯಾವಾಗಲೂ ದೈವೋನ್ಮಾದ  ಸ್ಥಿತಿಯಲ್ಲಿರುತ್ತಿದ್ದ ಭಾವುಕಳಾಗಿದ್ದರಿಂದ ಸಾಮಾನ್ಯ ಸ್ತ್ರೀಯರಂತೆ ಸಂಸಾರ ಸುಖವನ್ನು ಬಯಸದೆ, *ದೇವರ ನಾಮ ಸಂಕೀರ್ತನೆ ಮತ್ತು ಕಾವ್ಯ ರಚನೆಯಲ್ಲಿ ತನ್ನ ಜೀವನ ಸಾರ್ಥಕತೆಯನ್ನು ಕಂಡುಕೊಂಡಳು.*

ಹರಿದಾಸ ಪ್ರಮುಖರಲ್ಲಿ ಒಬ್ಬರಾದ *ಗೋಪಾಲದಾಸರು ಮತ್ತು ಮಂತ್ರಾಲಯ ಮಠದ ಸುಮತೀಂದ್ರ ಸ್ವಾಮಿಗಳು* ಗಿರಿಯಮ್ಮನ ಹಿರಿಯ ಸಮಕಾಲೀನರಾಗಿದ್ದರು ಎಂದು ತಿಳಿಸುವ ಐತಿಹ್ಯಗಳಿವೆ .

ಈಕೆಯ ಕೃತಿಗಳ ಮೇಲೆ *ಲಕ್ಷ್ಮೀಶ ಕವಿಯ ಪ್ರಭಾವವಿರುವದು* ಸ್ಪಷ್ಟವಿದೆ

*(ಚಂದ್ರಹಾಸನ ಕಥೆ)*.

ಗಿರಿಯಮ್ಮ ಭಾಗವತ ಸಂಪ್ರದಾಯದ *ಸ್ಮಾರ್ತ* ಮನೆತನಕ್ಕೆ ಸೇರಿದವಳು.

ಆಕೆ ಹರಿದಾಸ ಪಂಥಕ್ಕೆ ಸೇರಿದ ಸಂತಳಾದರು ಹರಿಹರ ಪ್ರಾಂತದ ವೈಶಿಷ್ಟ್ಯವೋ ಎಂಬಂತೆ *ಹರಿ-ಹರರಲ್ಲಿ ಭೇದವನ್ನ ಎಣಿಸದ ಸದ್ಭಕ್ತೆ.*

ಆಕೆ ಹೆಳವನ ಕಟ್ಟೆಯ.... *ಮೈಲಾರಲಿಂಗ ,ಹರಿಹರ ತಾಲ್ಲೂಕು ಕೊಕ್ಕನೂರು ಆಂಜನೇಯ ಸ್ವಾಮಿ, ಶಿವಮೊಗ್ಗ ಜಿಲ್ಲೆಯ ಪಿಳ್ಳಂಗಿರಿಯ  ರಂಗನಾಥ, ದಾಗಿನ ಕಟ್ಟೆಯ ನರಸಿಂಹಸ್ವಾಮಿ ದೇವರಗಳನ್ನು ಕುರಿತು ಸಹ ಕೀರ್ತನೆಗಳನ್ನು ರಚಿಸಿದ್ದಾಳೆ.*

ಭಕ್ತಿ ತಪಸ್ಸುಗಳಿಂದ ಪರಿಪಾಕಗೊಂಡ ಆಕೆಯ ಹೃದಯದಿಂದ ಕಾವ್ಯ ದೇವಿ ಪ್ರಕಟವಾದಳು.ಆಕೆಯ ವಾಣಿಯಿಂದ ಸುಮಧುರ ದೇವರನಾಮಗಳು. ಸರಸ ಕವಿತೆಗಳು ಸತತವಾಗಿ ಹೊರಹೊಮ್ಮಿದವು.

*ಉದ್ದಾಳಿಕನ ಕಥೆ, ಬ್ರಹ್ಮಕೊರವಂಜಿ,**ಶಂಕರ ಗಂಡನ ಹಾಡು, ಚಂದ್ರಹಾಸನ ಕಥೆ,ಲವ-ಕುಶರ ಕಾಳಗ, ಕೃಷ್ಣಕೊರವಂಜಿ, ...ಇವು ಹೆಳವನ ಕಟ್ಟೆ ಗಿರಿಯಮ್ಮನಿಂದ ರಚಿತವಾದ "ಕಥನ ಕಾವ್ಯಗಳು".*

*ಪಠ್ಯದ ಆಶಯ:-*....

*೧*

ಈತ ಲಿಂಗದೇವ ಶಿವನು

ಆತ ರಂಗಧಾಮ ವಿಷ್ಣು

ಮಾತ ಕೇಳೋ ಮಂಕು ಮನುಜ ಮನದ ಅಹಂಕಾರ ಬಿಟ್ಟು.

ಸ್ವಾರಸ್ಯ:-....

*ಹರಿ-ಹರರಲ್ಲಿ* ಭೇದ ಭಾವವನ್ನು ತೋರದೆ ಇಬ್ಬರ ಗುಣಗಾನವನ್ನು ಸಮಾನವಾಗಿ ಮಾಡಲಾಗಿದೆ.

ಈ ಹಾಡಿನಲ್ಲಿ *ಹರನ* ಹೆಸರು ಮೊದಲು *ಹರಿಯ* ಹೆಸರು ಆನಂತರ ಬಂದಿದೆ.

*"ಹರಿ-ಹರರಲ್ಲಿ"*  ಭೇದಭಾವವನ್ನು ಎಣಿಸದೆ ಸಮಾನವಾಗಿ ಕಾಣಬೇಕು ಎಂಬ ಭಾವದೊಂದಿಗೆ ,

ಮನುಷ್ಯ ಹರಿ-ಹರರಲ್ಲಿ ಭೇದ- ಭಾವ ತೋರದೇ, ಮನಸ್ಸಿನ ಅಹಂಕಾರ ಬಿಟ್ಟು ಸಮನ್ವಯತೆಯಿಂದ ಜೀವಿಸಬೇಕು ಎಂಬ ಭಾವ ವ್ಯಕ್ತವಾಗಿದೆ.

*೨*

ವೇದಕ್ಕೆ ಸಿಕ್ಕಿದನೀತ

ವೇದನಾಲ್ಕು ತಂದನಾತ

ಬೂದಿ ಮೈಯ್ಯೋಳು ಧರಿಸಿದ ನೀತ ಪೋದಗಿರಿಯ ಪೋತ್ತನಾತ.

ಸ್ವಾರಸ್ಯ:-...

ಶಿವನನ್ನು ವೇದ ಪ್ರಿಯನು ಎಂದು ಕರೆಯುತ್ತಾರೆ, ಹಾಗಾಗಿ ಆತ ವೇದಕ್ಕೆ ಸಿಕ್ಕಿದ.

ವಿಷ್ಣು - *೧]ಋಗ್ವೇದ ,೨]ಯಜುರ್ವೇದ ೩]ಸಾಮವೇದ ,೪]ಅಥರ್ವರ್ಣವೇದ* ಈ ನಾಲ್ಕು ವೇದಗಳನ್ನು ಭೂಮಿಗೆ ತಂದ ಎಂಬ ನಂಬಿಕೆ ಇದೆ.

ಅದೇ ರೀತಿ ಬೂದಿಯನ್ನು ಮೈಯಲ್ಲಿ ಧರಿಸಿದ ಶಿವನ ಸ್ವರೂಪವನ್ನು ಕಾಣಬಹುದು.

ಇಲ್ಲಿ ಬಹು ಮುಖ್ಯವಾಗಿ.. *ಕೂರ್ಮಾವತಾರದಲ್ಲಿ*

( ವಿಷ್ಣುವಿನ 'ಎರಡನೆ' ಅವತಾರ)

*ಅಮೃತಕ್ಕಾಗಿ ದೇವ ಸುರರು ಕ್ಷೀರ ಸಮುದ್ರವನ್ನು ಕಡೆಯುತ್ತಿದ್ದಾಗ* ಕಡೆಗೋಲಾಗಿದ್ದ ಮಂದಾರ ಪರ್ವತವು ಭಾರದಿಂದ ಮುಳುಗಲಾರಂಭಿಸಿತು ಆಗ...

*ಹರಿ ಕೂರ್ಮಾವತಾರ ಹೊಂದಿ ಮಂದಾರ ಪರ್ವತವನ್ನು ತನ್ನ ಬೆನ್ನ ಮೇಲೆ ಹೊತ್ತು ನಿಂತು ಸಮುದ್ರಮತನಕ್ಕೆ ನೆರವಾದನು* ಹಾಗಾಗಿ ವಿಷ್ಣುವನ್ನು

"ಪೋದಗಿರಿಯ ಪೋತ್ತನಾತ" ಎಂಬುದಾಗಿ ಸ್ಮರಿಸಲಾಗಿದೆ

*೩*

ವ್ಯಾಧನಾಗಿ ಒಲಿದನೀತ

ಮಾಧವ ಮಧುಸೂದನನಾತ ಮದನನ್ನ ಉರಿಹಿದನೀತ

ಮದನನಪಡೆದಾತನಾತ.

ಸ್ವಾರಸ್ಯ:- ಶಿವನು

*"ಕಿರಾತಾರ್ಜುನೀಯ"* ಪ್ರಸಂಗದಲ್ಲಿ ಕಿರಾತನವೇಷದಲ್ಲಿ ಬಂದು, *ಅರ್ಜುನನ ಶೌರ್ಯ ಪರಾಕ್ರಮಗಳನ್ನು ಪರೀಕ್ಷಿಸಿ*, ಆತನ ಶೌರ್ಯಕ್ಕೆ ಮನಸೋತು *ಪಾಶುಪತಾಸ್ತ್ರ* ವನ್ನು ಕೊಡುವುದರೊಂದಿಗೆ

(ಒಬ್ಬ ಬೇಟೆಗಾರನ ವೇಷದಲ್ಲಿ ಬಂದು ಅರ್ಜುನನೊಂದಿಗೆ ಕಾದಾಡಿ) ಒಲಿಯುತ್ತಾನೆ.

ಹರಿ *ಶ್ರೀಕೃಷ್ಣನ*......

(ವಿಷ್ಣುವಿನ'೦ಲ' ನೇ)ಅವತಾರವನ್ನು ತಾಳಿ ಮಧುಸೂದನನಾಗಿ ಸ್ತ್ರೀಯರ ಗೋಕುಲದಲ್ಲಿ ಕಾಣುತ್ತಾನೆ.

ಶಿವನ ತಪಸ್ಸನ್ನು ಭಂಗ ಮಾಡಿದ ಕಾರಣ *ಮೂರನೆಯ ಕಣ್ಣಿಂದ ಶಿವ "ಮನ್ಮಥನನ್ನ" ಸುಟ್ಟು ಹಾಕುತ್ತಾನೆ*

ಆದರೆ ಅದೇ *ಮನ್ಮಥನಿಗೆ ಶ್ರೀಕೃಷ್ಣ ಜನ್ಮಧಾತ*.

*೪*

ಗಂಗೆಯ ಪೊತ್ತವನೀತ

ಗಂಗೆ ಪದದಿ ಪಡೆದನಾತ

ತುಂಗ ಹೆಳವನಕಟ್ಟೆ

ಲಿಂಗ ಅಂತರಂಗ ರಂಗನಾಥ.

*ಸ್ವಾರಸ್ಯ:-*

ಶಿವನು ಗಂಗೆಯನ್ನು ಭೂಮಿಗೆ ತಂದು,ಗಂಗೆಯನ್ನೆ ತನ್ನ ಮುಡಿಯಲ್ಲಿ ಹೊತ್ತಿರುವ ಶಿವ *ಗಂಗಧರ* ಎಂಬ ಪದದಿಂದ ಬಿರುದಾಂಕಿತನಾದ.

" ಹೆಳವನ ಕಟ್ಟೆ ಗಿರಿಯಮ್ಮ"

ನವರು ತಾಯಿ *ತುಂಗಮ್ಮ* ನನ್ನು ಹಾಗೂ ತನ್ನ ಅಂತರಂಗದಲ್ಲಿ *ಹರಿ-ಹರ* ರನ್ನು ಸ್ಮರಿಸುವ ಮೂಲಕ ಭಕ್ತಿ ಸಮನ್ವಯತೆಯಿಂದ ಶ್ರೇಷ್ಠಳು ಎನಿಸಿರುವರು.

*"ಈತ ಲಿಂಗದೇವ ಶಿವನು ಆತ ರಂಗಧಾಮ"* ಎಂಬ ಪ್ರಸ್ತುತ ಕವಿತೆಯನ್ನು

*ಬಿ .ವಿ .ವೀರಭದ್ರಪ್ಪನವರು* ಸಂಪಾದಿಸಿದ *"ಹೆಳವನಕಟ್ಟೆ ಗಿರಿಯಮ್ಮ"* ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಬಾಲ್ಯದಿಂದಲೂ *ಶ್ರೀರಂಗನಾಥನ* ಪರಮ ಭಕ್ತೆಯಾದ ಗಿರಿಯಮ್ಮನವರು....

*"ಹರಿ ಮತ್ತು ಹರ* "ಇಬ್ಬರನ್ನು ಸಮಾನವಾಗಿ ಕಂಡವರು.

ಭಾರತೀಯ ಧಾರ್ಮಿಕ ಪರಿಸರದಲ್ಲಿ ಉಂಟಾದ *ಶೈವ ಮತ್ತು ವೈಷ್ಣವ ಸಂಸ್ಕೃತಿಯ* ನಡುವಿನ ಸಂಘರ್ಷವನ್ನು ಮೆಟ್ಟಿನಿಂತು ಈ ಎರಡು ಧಾರ್ಮಿಕ ಪರಂಪರೆಯ ನಡುವೆ ...

*ಸಮನ್ವಯತೆ ಸಾಧಿಸುವ* ಪ್ರಯತ್ನವನ್ನು ತಮ್ಮ*ತತ್ವಪದಗಳಲ್ಲಿ* ಕೈಗೊಂಡವರು ಹೀಗಾಗಿ ....

*"ಧಾರ್ಮಿಕ ಸಮನ್ವಯವೇ"* ಪ್ರಸ್ತುತ ಪಠ್ಯದ ಆಶಯವಾಗಿದೆ.

......✍

*ಮಹಂತೇಶ ಹೆಚ್.ಪಿ*

*ಕನ್ನಡ ಉಪನ್ಯಾಸಕರು*

*ಸರ್ಕಾರಿ ವಿಜ್ಞಾನ , ಕಾಲೇಜು-ಚಿತ್ರದುರ್ಗ-577501*